ಮಿಲ್ಲನ್ನು ಉಳಿಸಬೇಕು. ಬೆಳೆಸಬೇಕು. ಮತ್ತು ಅಲ್ಲಿ ಹೆಚ್ಚುಹೆಚ್ಚು ಜನರು ಕೆಲಸ ಮಾಡುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಒಂದು ಮಿಲ್ಲನ್ನು ಮುಚ್ಚಲೇಬೇಕೆಂದು ಸರ್ಕಾರದ ಉದ್ದೇಶ ಇದ್ದರೆ ಅದು ಬಹಳ ಕಷ್ಟ ಇರಲಿಲ್ಲ. ಏಕೆಂದರೆ ಈ ಟೆಕ್ಸ್‌ಟೈಲ್ಸ್ ಬಗ್ಗೆ ಪರಿಣತಿ ಹೊಂದಿದಂತಹ ಇಂಡಿಯನ್ ಟೆಕ್ಸ್‌ಟೈಲ್ ರಿಸರ್ಚ್ ಅಸೋಸೇಷನ್‌ನವರು ಇದನ್ನು ನಡೆಸಲು ಸಾಧ್ಯವಿಲ್ಲ. ಮುಚ್ಚಲೇಬೇಕೆಂದು, ವರದಿ ಕೊಟ್ಟಾಗಲೆ...

ಉಪಾಧ್ಯಕ್ಷಣಿಯವರು : ಶ್ರೀಯುತ ಸಾಂಡ್ರಾರವರೆ, ಉತ್ತರ ಹೇಳಲಿ, ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಲೇ ಅದನ್ನು ಮುಚ್ಚಲು ಸರ್ಕಾರ ನಿರ್ಣಯ ಮಾಡಬಹುದಾಗಿತ್ತು. ನಮ್ಮ ವರದಿಯ ಪ್ರಕಾರ ಅಲ್ಲಿ 834 ಜನ ಕೆಲಸ ಮಾಡುತ್ತಿದ್ದಾರೆ. ಈಗ ಅಲ್ಲಿ ಲೈಸೆನ್ಸ್ಡ್ ಕ್ಯಾಪ್ಯಾಸಿಟಿ 25 ಸಾವಿರ ಸ್ಪಿಂಡಲ್ಸ್, ಆದರೆ ಇನ್ಸ್ಟಾಲ್ ಕ್ಯಾಪ್ಯಾಸಿಟಿ 12 ಸಾವಿರ ಸ್ಪಿಂಟಲ್ಸ್ ಆದ್ದರಿಂದ ಇದನ್ನು ಸರ್ಕಾರ ಮುಚ್ಚಬಾರದೆಂದು ಹೇಳಿ ಪುನರ್‌ಸಜ್ಜೀಕರಣದ ಒಂದು ಯೋಜನೆಯನ್ನು ಮಾಡಿದ್ದೇವೆ. ಅದನ್ನು ಎರಡು ಹಂತದಲ್ಲಿ ಅನುಷ್ಠಾನ ಮಾಡಬೇಕೆಂಬ ಉದ್ದೇಶವಿದೆ.

ಅದು ಒಂದನೇ ಹಂತದಲ್ಲಿ 165 ಲಕ್ಷ ರೂಪಾಯಿ ಆಗುತ್ತದೆ. ಎರಡನೇ ಹಂತದಲ್ಲಿ ಸುಮಾರು 14ಕೋಟಿ ರೂಪಾಯಿಗಳಾಗುತ್ತದೆ. ಇದರ ಬಗ್ಗೆ ರೀಹ್ಯಾಬಿಲಿಟೇಷನ್ ಸ್ಕೀಮ್ ಒಂದು ತಯಾರು ಆಗುತ್ತಿದೆ. ಅದು ತಯಾರು ಆದಮೇಲೆ ಆ ಸಿಟ್ಟಾ ವರದಿಯನ್ನು ತಿರಸ್ಕರಿಸಿ ಪುನರ್‌ಸಜ್ಜೀಕರಣ ಮಾಡತಕ್ಕಂಥ ಒಂದು ಯೋಜನೆಯನ್ನು ಸ್ವೀಕಾರ ಮಾಡಿ, ಆಮೇಲೆ ನಾವು ಟರ್ಮ್ ಲೆಂಡಿಂಗ್ ಏನು ಬ್ಯಾಂಕುಗಳು ಇವೆ. ಅಪೆಕ್ಸ್‌ಬ್ಯಾಂಕ್ ಇನ್ಸ್‌ಟಿಟ್ಯೂಷನ್ ಇದೆ. ಅದಕ್ಕೆ ನಾವು ಹೋಗಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಅಲ್ಲಿಗೆ ಸಿಟ್ಟಾ ವರದಿ ಬಂದು ಹಾಗೆ ಮುಚ್ಚಿಕೊಂಡಿಲ್ಲ. ರೀಹ್ಯಾಬಿಲಿಟೇಷನ್ ಮಾಡಬೇಕೆಂದು ಹೇಳಿ ಉದ್ದೇಶದಿಂದಲೇ ಸಂಬಂಧಪಟ್ಟ ಇಲಾಖೆ ಇದಕ್ಕೆ ಸರಿಯಾದಂಥ ಯೋಜನೆಗಳನ್ನು ತಯಾರು ಮಾಡಿಕೊಂಡು, ಎರಡು ಹಂತದಲ್ಲಿ ಸರ್ಕಾರಕ್ಕೆ ಇದು ಪ್ರಸ್ತಾವನೆ ಕಳುಹಿಸುತ್ತಿದ್ದಾರೆ. ಸರ್ಕಾರಕ್ಕೆ ಪ್ರಸ್ತಾವನೆ ಬಂದಮೇಲೆ ನಾವು ಕ್ಯಾಬಿನೆಟ್ಟಲ್ಲಿ ಅದನ್ನು ಕಂಸಿಂಡರ್ ಮಾಡಿ ಆಮೇಲೆ ಇದರ ಬಗ್ಗೆ ಕೆಲವು ನಿರ್ಣಯ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಸನ್ಮಾನ್ಯ ಸದಸ್ಯರು ಏನೋ ಸರ್ಕಾರ ಸುವನೆ ಇದೆ ಸರ್ಕಾರ ಇದನ್ನು ಮುಚ್ಚಬೇಕೆಂದು ಇದೆ. ಎಂದು ಹೇಳುವಂತಾದ್ದು ಇಲ್ಲ. ಆದ್ದರಿಂದ ನಾವು ಇನ್ನು ಮುಂದೆ ಲೆಂಡಿಂಗ್ ಇನ್ಸ್‌ಟಿಟ್ಯೂಷನ್ ಅವರ ಜೊತೆಯಲ್ಲಿ ಮಾತನಾಡಬೇಕಾಗುತ್ತದೆ. ಇದನ್ನು ನಡೆಸುವುದು. ಪುನರ್‌ಸಜ್ಜೀಕರಣ ಗೊಳಿಸಬೇಕೆಂಬುದು ಸರ್ಕಾರದ ಉದ್ದೇಶ ಇದೆ. ಅದು ಎಷ್ಟರ ಮಟ್ಟಿಗೆ ಸಾಧನೆಯಾಗುತ್ತದೆ. ಎಂಬುದು ಮತ್ತೆ ಟರ್ಮ್ ಲೆಂಡಿಂಗ್ ಇನ್ಸ್‌ಟಿಟ್ಯೂಷನ್ ಮೇಲೆ ಡಿಪೆಂಡ್ ಆಗುತ್ತದೆ.

ನಿಯಮ 334 ರ ಮೇರೆಗೆ

**ಚಾಮರಾಜನಗರ ತಾಲ್ಲೂಕು ಅರಕಲವಾಡಿ ಗ್ರಾಮದ ಪರಿಶಿಷ್ಟ ಜಾತಿಯವರಿಗೆ ಕೂಲಿ ಒದಗಿಸುವ ಬಗ್ಗೆ.**

ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ): ಅಧ್ಯಕ್ಷರೇ, ಚಾಮರಾಜನಗರ ತಾಲ್ಲೂಕು ಅರಕಲವಾಡಿ ಗ್ರಾಮದಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿಯವರ ಮೇಲೆ ಅದೇ ಗ್ರಾಮದ ಲಿಂಗಾಯಿತರ ಕೋಮಿನವರು ಹಾಗೂ ಮಂಡಲ್ ಪಂಚಾಯ್ತಿಯವರು ಸಾಮಾಜಿಕ ಬಹಿಷ್ಕಾರವನ್ನು ಹಾಕಿರುತ್ತಾರೆಂದು ಸದರಿ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ತಾಲ್ಲೂಕು ಕಲ್ಯಾಣ ಸಮಿತಿಗೆ ಬಂದಿರುವ ವರದಿಯಿಂದ

ತಿಳಿದುಬಂದಿದೆ, ಬಹುತೇಕ ಭೂಹೀನರಾಗಿ ಇತರ ಜೀವನ ಮಾರ್ಗೋಪಾಯಗಳು ಇಲ್ಲದೇ ಕೂಲಿಯಿಂದಲೇ ಜೀವನ ಸಾಗಿಸಬೇಕಾಗಿರುವ ಇವರಿಗೆ ಕೂಲಿನಾಲಿ ಇಲ್ಲದೆ ಹಸಿವಿನಿಂದ ನರಳುತ್ತಿರುವ ಮೇಲೆ ಮತ್ತು ಬೇರೆ ಊರುಗಳಿಗೆ ಕೂಲಿನಾಲಿ ಮಾಡಿಕೊಂಡು ಸಾಯಂಕಾಲ ಹಿಂದಿರುಗುತ್ತಿರುವವರ ಮೇಲೆ ಕಲ್ಲು ತೂರಾಟ ಮಾಡುತ್ತಾರೆಂದು ತಿಳಿದು ಬಂದಿರುತ್ತದೆ. ಈ ಬಗ್ಗೆ ಸ್ಥಳಕ್ಕೆ ಹೋಗಿ ವಿಚಾರಿಸಲು ಸಂಬಂಧಪಟ್ಟ ತಹಶೀಲ್ದಾರರು ಮತ್ತು ಮೇಲ್ಕಂಡ ಕಲ್ಯಾಣ ಸಮಿತಿ ಸದಸ್ಯರಿಗೂ ಸಹ ಅವಕಾಶವಾಗಿಲ್ಲ. ಆದುದರಿಂದ ಈ ಬಗ್ಗೆ ಪರಿಶಿಷ್ಟ ಜಾತಿಯವರಿಗೆ ಕೂಲಿ ಒದಗಿಸುವ ವಿಚಾರ ಮತ್ತು ಅವರಿಗೆ ಬೇಕಾದ ಆಹಾರವನ್ನು ಒದಗಿಸಲು ತೆಗೆದುಕೊಂಡಿರುವ ಇಲ್ಲವೇ ತೆಗೆದುಕೊಳ್ಳಬಹುದಾದ ಕಾರ್ಯಕ್ರಮದ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ, (ಶಿಕ್ಷಣ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತಿದ್ದೇನೆ.

ಚಾಮರಾಜನಗರ ತಾಲ್ಲೂಕು ಅರಕಲವಾಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 50 ಕುಟುಂಬದವರು ವಾಸವಾಗಿರುತ್ತಾರೆ. ಇವರಲ್ಲಿ 15 ರಿಂದ 20 ಕುಟುಂಬಗಳಿಗೆ ತಲಾ ಒಂದು-ಎರಡು ಎಕರೆ ಜಮೀನು ಇರುತ್ತದೆ, ಉಳಿದವರು ಭೂರಹಿತರಾಗಿರುತ್ತಾರೆ.

ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಜನರಿಗೆ ಪ್ರತ್ಯೇಕವಾದ ಸ್ಮಶಾನವಿರುವುದಿಲ್ಲ ಇವರು ಮುಂದುವರೆದ ಜನಾಂಗದವರಿಗೆ ಸೇರಿದ ಒಬ್ಬರ ಖಾಸಗಿ ಜಮೀನನ್ನು ಸ್ಮಶಾನಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಜಮೀನನ್ನು ಪರಿಶಿಷ್ಟ ಜಾತಿಯವರಿಗೆ ಸ್ಮಶಾನದ ಉಪಯೋಗಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ತಹಶೀಲ್ದಾರರು ಕ್ರಮ ಕೈಗೊಂಡಿರುತ್ತಾರೆ. ಈ ಭೂಸ್ವಾಧೀನದ ಕ್ರಮದ ವಿರುದ್ಧ ಸಂಬಂಧಪಟ್ಟ ಭೂ ಮಾಲೀಕರು ಜೆ.ಎಂ.ಎಫ್.ಸಿ.(jmfc)ಕೋರ್ಟ್ ಚಾಮರಾಜನಗರದಲ್ಲಿ ಕೇಸನ್ನು ದಾಖಲು ಮಾಡಿರುತ್ತಾರೆ.

ಈ ಸ್ಮಶಾನದ ಜಮೀನಿನ ವಿಷಯದಲ್ಲಿ ಪರಿಶಿಷ್ಟ ಜಾತಿಯವರಿಗೂ ಹಾಗೂ ಗ್ರಾಮದ ಮುಂದುವರೆದ ಜನಾಂಗದವರಿಗೂ ಭಿನ್ನಭಿಪ್ರಾಯವಿದ್ದುದರಿಂದ ಎರಡು ಕೋಮುಗಳಲ್ಲಿ ಮನಸ್ತಾಪ ಉಂಟಾಗಿರುತ್ತದೆ. ಕಳೆದ ಒಂದೆರಡು ತಿಂಗಳಿಂದ ಪರಿಶಿಷ್ಟ ಜನರು ಕೂಲಿಗಾಗಿ ಬೇರೆ ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗುತ್ತಿರುತ್ತಾರೆ.

ಸುಮಾರು ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಅಸಿಸ್ಟೆಂಟ್ ಕಮೀಷನರ್ ಹಾಗೂ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ನಂಜನಗೂಡು, ತಹಶೀಲ್ದಾರ್, ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್ (ರೂರಲ್) ಚಾಮರಾಜನಗರ ಮತ್ತು ಸ್ಥಳೀಯ ಮುಖಂಡರುಗಳು ಸೇರಿ ಶಾಂತಿಯನ್ನು ಕಾಪಾಡಿಕೊಂಡು ಹೋಗಲು ಸಭೆಯನ್ನು ಸಡೆಸಲಾಯಿತು. ಇವರುಗಳು ಎರಡು ಗುಂಪಿನಲ್ಲಿ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಂಡು ಹೋಗಲು ವಿನಂತಿಸುತ್ತಾರೆ. ಆದರೂ ಸಹ ಈ ಎರಡು ಕೋಮಿನವರು ರಾಜಿಯಾಗಿರುವುದಿಲ್ಲ. ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಮೈಸೂರು ಹಾಗೂ ಇತರೆ, ಅಧಿಕಾರಿಗಳು ಸೇರಿ ಈ ಎರಡು ಕೋಮುಗಳಲ್ಲಿ ಸರಿಯಾದ ತಿಳುವಳಿಕೆ ಸಹಬಾಳ್ವೆ ಮತ್ತು ನೆಮ್ಮದಿಯಿಂದಿರಲು ವಾತಾವರಣ ಕಲ್ಪಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಪರಿಶಿಷ್ಟ ಜಾತಿಯವರಿಗೆ ಪ್ರತ್ಯೇಕವಾಗಿ ಒಂದು ನ್ಯಾಯ ಬೆಲೆ ಅಂಗಡಿಯನ್ನು ಕಂದಾಯ ಇಲಾಖೆಯ ವತಿಯಿಂದ ಮಂಜೂರು ಮಾಡಿರುತ್ತಾರೆ. ಈ ನ್ಯಾಯಬೆಲೆ

ಅಂಗಡಿಯಲ್ಲಿ ಆಹಾರ ಪದಾರ್ಥಗಳನ್ನು ನ್ಯಾಯಯುತವಾದ ಬೆಲೆಯಲ್ಲಿ ನೀಡುತ್ತಿರುತ್ತಾರೆ. ಈ ಎರಡು ಕೋಮಿನ ಜನರಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದಿರುವುದರಿಂದ ಅದೇ ಗ್ರಾಮದಲ್ಲಿ ಕೆಲವು ಮುಂದುವರಿದು ಜನಾಂಗದವರು ಪರಿಶಿಷ್ಟ ಜಾತಿಗೆ ಜನರನ್ನು ಕೆಲಸಕ್ಕೆ ಕರೆದರೂ ಇವರುಗಳು ಯಾರು ಕೆಲಸಕ್ಕೆ ಹೋಗುತ್ತಿಲ್ಲವೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ.

ಚಿಲ್ಲಾಧಿಕಾರಿಗಳು ಹಾಗೂ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರವರು ಪರಿಶಿಷ್ಟ ಜಾತಿಯ ಜನರಿಗೆ ತಮ್ಮ ದಿನನಿತ್ಯದ ಕೆಲಸ ಕಾರ್ಯಗಳ ನಿರ್ವಹಣೆಗೆ ಯಾವ ಅಡಚಣೆಯಾಗದಂತೆ ಸೂಕ್ತ ರಕ್ಷಣೆಯನ್ನು ನೀಡಲಾಗುತ್ತಿದೆ. ಪರಿಶಿಷ್ಟ ಜಾತಿಯ ಜನರಲ್ಲಿ ಜಮೀನು ಇರುವವರಿಗೆ ನೀರಾವರಿ ವ್ಯವಸ್ಥೆ ಮಾಡಲು, ಭೂರಹಿತರಿಗೆ ಸ್ವಯಂ ಉದ್ಯೋಗವನ್ನು ಮಾಡಲು ಆರ್ಥಿಕ ನೆರವನ್ನು ನೀಡುವ ಕಾರ್ಯಕ್ರಮಗಳನ್ನು ರೂಪಿಸಲು ವ್ಯವಸ್ಥಾಪಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಇವರಿಗೆ ಕೋರಲಾಗಿದೆ.

ಸರ್ಕಾರದ ವತಿಯಿಂದ ಈ ದೆಸೆಯಲ್ಲಿ ಪರಿಶಿಷ್ಟ ಜಾತಿಯ ಜನರಿಗೆ ಸ್ವಯಂ ಉದ್ಯೋಗವನ್ನು ಮಾಡಲು ಆಫ್ರಿಕಾ ನೆರವು ನೀಡುವ ಬಗ್ಗೆ, ಜಮೀನು ಹೊಂದಿದವರಿಗೆ ನೀರಾವರಿ ವ್ಯವಸ್ಥೆ ಮಾಡುವ ಬಗ್ಗೆ, ಇವರಿಗೆ ಆಹಾರ ಪದಾರ್ಥಗಳನ್ನು ಅಡಚಣೆಯಿಲ್ಲದೆ ಸರಬರಾಜು ಮಾಡುವ ಬಗ್ಗೆ ಮತ್ತು ಇವರು ಶಾಂತಿಯಿಂದ ನೆಲಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಕೆ. ಸಿದ್ದಯ್ಯ: ಉಪಾಧ್ಯಕ್ಷೆಯವರೆ ಮಾನ್ಯ ಮಂತ್ರಿಗಳು ಈಗ ತಾನೆ ಹೇಳಿದ ಪ್ರಕಾರ ಹರಿಜನರು ಉಪಯೋಗ ಮಾಡುತ್ತಿದ್ದ ಸ್ಮಶಾನದ ಜಮೀನು...

ಉಪಾಧ್ಯಕ್ಷೆಯವರು : ಸಿದ್ದಯ್ಯನವರೇ, ನಿಯಮ 334ರ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆಗೆ ಅವಕಾಶವಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

**2) ಬೆಂಗಳೂರಿನ ಹಳೀಗುಡ್ಡದಳ್ಳಿಯಲ್ಲಿನ ನೀರಿನ ಸಮಸ್ಯೆ ಬಗ್ಗೆ:**

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಉಪಾಧ್ಯಕ್ಷೆಯವರೆ, ಬೆಂಗಳೂರಿನ ಹಳೀಗುಡ್ಡದಳ್ಳಿಯಲ್ಲಿನ (ಮೈಸೂರು ರಸ್ತೆ ಬಳಿ) 10ನೇ ಬಿ. ಅಡ್ಡರಸ್ತೆ ಹಾಗೂ ಅದರ ಸುತ್ತಮುತ್ತಲಿನ ಸುಮಾರು 50 ಮನೆಗಳನ್ನು ಹೊರತುಪಡಿಸಿ ಅಲ್ಲಿನ ಇತರ ಬೀದಿಗಳಲ್ಲಿ ನೀರು ಪೂರೈಕೆಯಾಗುತ್ತಿದ್ದು ಮೇಲ್ಕಂಡ 50 ಮನೆಗಳಿಗೆ ಮಾತ್ರ ಕಳೆದ 4-5 ತಿಂಗಳಿಂದಲೂ ಸಹ ಸರಿಯಾಗಿ ನೀರು ಸರಬರಾಜು ಆಗದೇ ಇದ್ದು ಅಲ್ಲಿನ ನಿವಾಸಿಗಳು ತಮಗೆ ಆಗುತ್ತಿರುವ ನೀರಿನ ಸಮಸ್ಯೆಯನ್ನು ಸರಿಪಡಿಸಿಕೊಡಬೇಕೆಂದು ಕೋರಿ ಸಂಬಂಧಪಟ್ಟ ಅಧಿಕಾರಿವರ್ಗದವರಿಗೆ (ಎಕ್ಸಿಕ್ಯುಟೀವ್ ಇಂಜಿನಿಯರ್ ನೀರು ಸರಬರಾಜು ವಿಭಾಗ ಚಾಮರಾಜಪೇಟೆ) ಈ ಹಿಂದೆ ಮನವಿಯನ್ನು ಒಪ್ಪಿಸಲಾಗಿದ್ದು ಹಾಗೂ ಪ್ರತ್ಯಕ್ಷವಾಗಿ ಅನೇಕಸಾರಿ ಮನವಿ ಮಾಡಿಕೊಂಡಿದ್ದಾಗ್ಯೂ ಸಹ ಯಾವುದೇ ಪ್ರಯೋಜನವಾಗದೇ ಇದ್ದು ಅವರಿಂದ ನೀರು ಬರುವ ಕಡೆ ಮನೆಗಳನ್ನು ಕಟ್ಟಿಕೊಂಡು ಹೋಗಿ ಎಂಬ ಉತ್ತರ ಬರುತ್ತಿದೆ ಎಂದು ತಿಳಿದು ಬಂದಿರುತ್ತದೆ. ಆದುದರಿಂದ ಇಲ್ಲಿನ ನಿವಾಸಿಗಳಿಗೆ ಆಗುತ್ತಿರುವ ನೀರಿನ ಸಮಸ್ಯೆಯನ್ನು ಸರಿಪಡಿಸಿಕೊಡಬೇಕೆಂದು ಕೋರುತ್ತಾ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷೆಯವರೆ, ಹಳೀ ಗುಡ್ಡದಳ್ಳಿ ಪ್ರದೇಶದಲ್ಲಿ 10ನೇ ಅಡ್ಡ ರಸ್ತೆಯು ಎತ್ತರದ ಪ್ರದೇಶದಲ್ಲಿದೆ. ಈ ಪ್ರದೇಶದಲ್ಲಿ ಮುಂಚೆ 3ರಿಂದ 4 ಗಂಟೆಕಾಲ ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ನೀರಿನ ಸರಬರಾಜು ಇತ್ತು. ಈ ಪ್ರದೇಶದಲ್ಲಿ ಸುಮಾರು 1000 ಮನೆಗಳಿವೆ. ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಕೆರೆಗಳಿಂದ ನಗರಕ್ಕೆ ಬರುವ